**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 434/2016** ಸಿ.ಡಬ್ಲು-11

ಪಿ.ಡಬ್ಲು-11

| | | |
|---|---|---|
| ಹೆಸರು | ಃ | ಡಾಃ ಸಲೇಹ |
| ತಂದೆಃಗಂಡ | ಃ | ಎಮ.ಡಿ.ಯುನಸಖಾನ್ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ವೈದ್ಯಾಧಿಕಾರಿಗಳು ಜಿಲ್ಲಾ ಆಸ್ಪತ್ರೆ ಕಲಬರುಗಿ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ 25.09.2025

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ನಾನು 2015 ರಿಂದ 2017 ರವರೆಗೆ ನಿಂಬರ್ಗಾದ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

ದಿಃ 17-10-2015 ರಂದು ಮಧ್ಯಾಹ್ನ 3.15 ಗಂಟೆಗೆ ಚಾಸಾ 6 ರವರು ಹಲ್ಲೆಯ ಹಿನ್ನಲೆಯ ಮೇಲೆ ಆಸ್ಪತ್ರೆಗೆ ನಿಂಬರ್ಗಾ ಪೋಲಿಸರ ಮನವಿಯ ಮೇರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಿ ನೋಡಿದಾಗ ಅವರಿಗೆ ಎಡಗಾಲಿನ ಮೇಲಿನ ತೆರಿಚಿದ ಗಾಯ ಮತ್ತು ಲ್ಯಾಕುರೇಟೆಡ್ ಗಾಯ 0.1*0.2 ಎಮ.ಎಮ ಇದ್ದು, ಬಲಗಾಲಿನ ಮೇಲೆ ತೆರಚಿದ ಗಾಯ ಮತ್ತು ಎಡಗೈಯ ಬೆರಳಿನ ಮೇಲೆ ತೆರಚಿದ ಗಾಯ ನನ್ನ ಪ್ರಕಾರ ಸದರಿ ಗಾಯಗಳು ಯಾವುದಾದರು ಚೂಪಾದ ವಸ್ತುವಿನಿಂದ ಆಗಬಹುದು. ಸದರಿ ಗಾಯಗಳು ಸಾದಾ ಗಾಯಗಳು ಇರುತ್ತವೆ. ಸದರಿ ಗಾಯಗಳು 10 ರಿಂದ 12 ಗಂಟೆಗಳೊಳಗೆ ಆಗಿರಬಹುದು.

ಅದೇ ದಿನ ಚಾಸಾ 7 ರವರು 3.30 ಗಂಟೆಗೆ ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ನಿಂಬರ್ಗಾ ಪೋಲಿಸರ ಮನವಿಯ ಮೇರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಿ ನೋಡಿದಾಗ ಅವರಿಗೆ ಬಲಗೈಯ ಮೇಲೆ ತೆರಚಿದ ಗಾಯ ಆಗಿತ್ತು. ನನ್ನ ಪ್ರಕಾರ ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ

ವಸ್ತುಗಳಿಂದ ಆಗಿರಬಹುದು. ಸದರಿ ಗಾಯವು ಸಾದಾ ಗಾಯ ಇರುತ್ತದೆ. ಸದರಿ ಗಾಯ 10 ರಿಂದ 12 ಗಂಟೆಗಳೊಳಗೆ ಆಗಿರಬಹುದು.

ಸಾಕ್ಷಿಯು ಅವರು ನೀಡಿದ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ. 6 ಮತ್ತು 7 ಅಂತಾ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 6 ಎ ಮತ್ತು 7 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಬಿ.ಎ.ಡಿ ವಕೀಲರರಿಂದ.**

ದಿಃ 17-10-2015 ರಂದು ಚಾಸಾ 6 ಮತ್ತು 7 ರವರು ನಮ್ಮ ಆಸ್ಪತ್ರೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ವ್ಯಕ್ತಿಗಳನ್ನು ಪರೀಕ್ಷೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಹೇಳಿಕೆಯ ಮೇರೆಗೆ ನಾನು ನಿಪಿ. 6 ಮತ್ತು 7 ನ್ನು ಸೃಷ್ಟಿ ಮಾಡಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ.ಸಿ. ಆಳಂದ.